

# 8 ಹಸಿವಿನ ಸೂಚ್ಯಂಕದಲ್ಲಿ ಜಾರುತ್ತಿರುವುದೇಕೆ?

ಆಹಾರಧಾನ್ಯಗಳ ಉತ್ಪಾದನೆ ಏರುಗತಿಯಲ್ಲಿದೆ. ಧಾನ್ಯಗಳನ್ನು ಉಚಿತವಾಗಿ ಇಲ್ಲವೇ ರಿಯಾಯಿತಿ ದರದಲ್ಲಿ ಪೂರೈಸಲು ಪಡಿತರ ವ್ಯವಸ್ಥೆಯ (ಪಿಡಿಎಸ್) ದೊಡ್ಡ ಜಾಲವೇ ಇದೆ. ಬಡವರಿಗೆ ಕಡಿಮೆ ದರದಲ್ಲಿ ಮಿತವಾಗಿ ಉಪಾಹಾರ, ಊಟ ಒದಗಿಸಲು ಬೇರೆ ಬೇರೆ ಹೆಸರಿನಲ್ಲಿ ಕೆಲವು ರಾಜ್ಯ ಸರ್ಕಾರಗಳೇ ಕ್ಯಾಂಟೀನ್ ಸವಲತ್ತು ಕಲ್ಪಿಸಿವೆ. ಆದರೂ ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ ಭಾರತದ ಸ್ಥಾನ ವರ್ಷದಿಂದ ವರ್ಷಕ್ಕೆ ಕೆಳಗೆ ಜಾರುತ್ತಲೇ ಇದೆ! ಏಕೆ?

ವಿಶ್ವದ 116 ದೇಶಗಳಲ್ಲಿನ ಪರಿಸ್ಥಿತಿಯನ್ನು ಅಧ್ಯಯನ ಮಾಡಿ 2021ರ ಹಸಿವಿನ ಸೂಚ್ಯಂಕ ಸಿದ್ಧಪಡಿಸಲಾಗಿದೆ. ಇದರಲ್ಲಿ ಭಾರತ ತೀರಾ ಕೆಳಗಿನ ರ‍್ಯಾಂಕ್ ಪಡೆದಿದೆ. ಈ ದೇಶಗಳ ಪೈಕಿ ನಮ್ಮದು 101ನೇ ಸ್ಥಾನ. 2020ರ ಸೂಚ್ಯಂಕದಲ್ಲಿ 107 ದೇಶಗಳ ಪೈಕಿ 94ನೇ ಸ್ಥಾನದಲ್ಲಿತ್ತು ಭಾರತ. ಈ ಸಲದ ಸೂಚ್ಯಂಕದಲ್ಲಿ ನೆರೆಯ ಬಾಂಗ್ಲಾದೇಶ, ನೇಪಾಳ, ಪಾಕಿಸ್ತಾನ, ಮ್ಯಾನ್ಮಾರ್‌ನಂತಹ ದೇಶಗಳು ಭಾರತಕ್ಕಿಂತ ಉತ್ತಮ ಸ್ಥಾನ ಪಡೆದಿವೆ ಎಂಬುದು ನಮ್ಮ ಅಭಿವೃದ್ಧಿ ಪರಿಕಲ್ಪನೆಗಳ ಬಗೆಗೆ ಪುನರಾವಲೋಕನ ನಡೆಸಬೇಕಾದ ಅಗತ್ಯವನ್ನು ಸೂಚಿಸುತ್ತದೆ.

ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ ಹತ್ತು ವರ್ಷಗಳಿಂದಲೂ ನಮ್ಮ ಸ್ಥಾನ ಕೆಳಮುಖವಾಗಿಯೇ ಇದೆ. ಆದರೆ, ಇತ್ತೀಚಿನ ವರ್ಷಗಳಲ್ಲಿ ಆಹಾರಧಾನ್ಯಗಳ ಉತ್ಪಾದನೆಯಲ್ಲಿ ದೇಶ ಸತತವಾಗಿ ಏರಿಕೆಯನ್ನು ದಾಖಲಿಸಿದೆ. ಕೊರೊನಾ ಸಾಂಕ್ರಾಮಿಕದಂತಹ ತೀವ್ರ ಬಿಕ್ಕಟ್ಟಿನ ಈ ಕಾಲಘಟ್ಟದಲ್ಲೂ ಧಾನ್ಯ ಉತ್ಪಾದನಾ ಗ್ರಾಫ್ ಏರುಮುಖವಾಗಿಯೇ ಇದೆ. 2020–21ರ ಬೆಳೆ ಋತುವಿನಲ್ಲಿ ನಮ್ಮ ಧಾನ್ಯ ಉತ್ಪಾದನೆಯು 308 ದಶಲಕ್ಷ ಟನ್‌ಗಳಿಗೆ ಏರಬಹುದು ಎಂದು ಕೃಷಿ ಸಚಿವಾಲಯ ಅಂದಾಜಿಸಿದೆ. ಇದು, ಕಳೆದ ವರ್ಷದ ಉತ್ಪಾದನೆ ಪ್ರಮಾಣಕ್ಕಿಂತ ಶೇಕಡ 3.75ರಷ್ಟು ಹೆಚ್ಚು.

ಜಾಗತಿಕ ಹಸಿವಿನ ಸೂಚ್ಯಂಕವನ್ನು ಐರ್ಲೆಂಡ್‌ನ 'ಕನ್ಸರ್ನ್ ವರ್ಲ್ಡ್‌ವೈಡ್' ಮತ್ತು ಜರ್ಮನಿಯ 'ವೆಲ್ತ್ ಹಂಗರ್ ಹಿಲ್ಫ್' ಸಂಸ್ಥೆಗಳು ಸಿದ್ಧಪಡಿಸಿವೆ. ಅಪೌಷ್ಟಿಕತೆ, ಐದು ವರ್ಷದೊಳಗಿನ ಮಕ್ಕಳ ಮರಣ ಪ್ರಮಾಣ, ಎತ್ತರ ಮತ್ತು ತೂಕ ಕಡಿಮೆ ಇರುವುದನ್ನು ಪರಿಗಣಿಸಿ ಸೂಚ್ಯಂಕವನ್ನು ಸಿದ್ಧಪಡಿಸಲಾಗುತ್ತದೆ. ಭಾರತದಲ್ಲಿನ ಹಸಿವಿನ ಪರಿಸ್ಥಿತಿಯು ಅಪಾಯಕಾರಿ ಎಂದು ಹಸಿವಿನ ಸೂಚ್ಯಂಕದ ಈ ವರದಿ ಹೇಳಿದೆ. ಯೆಮನ್ ಮತ್ತು ಸೊಮಾಲಿಯಾದಂತಹ 15 ಕಡು ಬಡ ದೇಶಗಳ ಸಾಲಿಗೆ ಭಾರತ ಸೇರಿಕೊಂಡಿದೆ ಎಂಬುದು ಕಳವಳಕಾರಿ. ಈ ದುಃಸ್ಥಿತಿಯು ಸರ್ಕಾರದ ಯೋಜನೆಗಳು ಅರ್ಹರಿಗೆ ತಲುಪುತ್ತಿರುವ ಬಗೆಗೆ ಅನುಮಾನಗಳನ್ನು ಹುಟ್ಟುಹಾಕುತ್ತದೆ.

ಹಸಿವು, ಬಡತನ ಮತ್ತು ಅಪೌಷ್ಟಿಕತೆ ನಡುವೆ ನೇರ ಸಂಬಂಧ ಇದೆ. ಹೊತ್ತಿಗೆ ಹೇಗೋ ಒಂದು ತುತ್ತು ಪಡೆಯುವುದನ್ನೇ ಸತ್ವಭರಿತ ಆಹಾರ ಎಂದು ಪರಿಗಣಿಸಲಾಗದು. ಮುಗ್ಗಲು ಧಾನ್ಯ ಪೂರೈಸುವುದನ್ನೇ ಆಹಾರ ಭದ್ರತೆ ಎಂದು ಭಾವಿಸಲಾಗದು. ಆರ್ಥಿಕವಾಗಿ ಸಬಲರಲ್ಲದ ಜನವರ್ಗಕ್ಕೆ ಹೊಟ್ಟೆ ತುಂಬ ಊಟ ಮಾಡುವಂತಹ ಸ್ಥಿತಿ ನೆಲೆಗೊಂಡಿದೆಯೇ, ಪೌಷ್ಟಿಕ ಆಹಾರ ಖರೀದಿಸಲು ಆ ಕುಟುಂಬಗಳಿಗೆ ಎಷ್ಟರಮಟ್ಟಿಗೆ ಸಾಧ್ಯವಾಗುತ್ತಿದೆ ಎಂಬುದರ ಬಗ್ಗೆ ಶಾಸ್ತ್ರೀಯವಾಗಿ ಅಧ್ಯಯನಗಳು ಆಗಬೇಕು. 'ಹಸಿವಿನ ಬಾಧೆ ತೊಲಗಿಸಬೇಕಾದರೆ ಅದಕ್ಕೆ ಕಾರಣವಾಗುವ ಎಲ್ಲ ಅಂಶಗಳ ನಿವಾರಣೆಯ ಕೆಲಸ ಜೊತೆಜೊತೆಗೇ ನಡೆಯಬೇಕು. ಅದರಲ್ಲೂ ಬಡತನ ನಿವಾರಣೆಗೆ ಒತ್ತು ಸಿಗಬೇಕು. ಧಾನ್ಯ ಉತ್ಪಾದನೆ ಹೆಚ್ಚಿಸುವುದಕ್ಕೆ ಮಾತ್ರ ಗಮನ ಕೇಂದ್ರೀಕರಿಸಿದರೆ ಸಾಲದು' ಎಂದು ಅರ್ಥಶಾಸ್ತ್ರಜ್ಞ ಅಮರ್ತ್ಯ ಸೇನ್ ಮಾತು ಇಲ್ಲಿ ಮನನೀಯ.

# 9 ಗೂಢಲಿಪಿ ಕರೆನ್ಸಿ



ಬಿಟ್‌ಕಾಯಿನ್ ವ್ಯವಹಾರಗಳಿಗೆ ಬಳಕೆ ಆಗುವುದು ಬ್ಲಾಕ್‌ಚೈನ್ ತಂತ್ರಜ್ಞಾನ. ಈ ತಂತ್ರಜ್ಞಾನದ ಕಾರಣದಿಂದಾಗಿಯೇ ಬಿಟ್‌ಕಾಯಿನ್ ವ್ಯವಹಾರಗಳು ಸುರಕ್ಷಿತ ಎಂಬ ಮಾತು ಇದೆ. ಸುರಕ್ಷಿತ ಅಂದರೆ, ಕಾನೂನುಬದ್ಧ ಅಂತೇನೂ ಅಲ್ಲ. ಬದಲಿಗೆ, ಬಿಟ್‌ಕಾಯಿನ್ ಎಂಬ ವಸ್ತುವೂ ಅಲ್ಲದ, ಸರ್ಕಾರಗಳ ಬೆಂಬಲ ಇರುವ ಕರೆನ್ಸಿಯೂ ಅಲ್ಲದ, ಸಮುದಾಯದ ಬೆಂಬಲದ ಆಧಾರದಲ್ಲಿ ನಡೆಯುವ ಕರೆನ್ಸಿಯನ್ನು ಯಾರೂ ಹ್ಯಾಕ್ ಮಾಡಲು ಸಾಧ್ಯವಿಲ್ಲ ಎಂಬುದು ಆ ಮಾತಿನ ಅರ್ಥ. ಬಿಟ್‌ಕಾಯಿನ್ ಬಳಕೆದಾರರ ವಾಲೆಟ್‌ನಲ್ಲಿ ಇರುವ ಕಾಯಿನ್ ಕದಿಯಬಹುದಾದ ಸಾಧ್ಯತೆಗಳೂ ಇವೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಶ್ರೀಕೃಷ್ಣ ಅಲಿಯಾಸ್ ಶ್ರೀಕಿ ಎನ್ನುವ ಮಹಾಬುದ್ಧಿವಂತನೊಬ್ಬ ಬಿಟ್‌ಕಾಯಿನ್‌ಗಳನ್ನು ಲೀಲಾಜಾಲವಾಗಿ ಹ್ಯಾಕ್ ಮಾಡಬಹುದು ಎಂಬುದನ್ನು ತೋರಿಸಿಕೊಟ್ಟ ವರ್ಷ 2021. ಸಣ್ಣದೊಂದು ಗುಸುಗುಸು, ಟ್ವಿಟರ್‌ನಲ್ಲಿ ಕೆಲವು ರಾಜಕಾರಣಿಗಳು ಪರೋಕ್ಷವಾಗಿ ಪ್ರಸ್ತಾಪಿಸುವ ಮೂಲಕ ಕರ್ನಾಟಕದ ಬಿಟ್‌ಕಾಯಿನ್ ಹಗರಣದ ಬಗ್ಗೆ ಮಾತುಗಳು ಆರಂಭವಾದವು. ನಂತರ, ಇದರಲ್ಲಿ ರಾಜ್ಯ ರಾಜಕಾರಣದ ಪ್ರಮುಖ ವ್ಯಕ್ತಿಗಳು ಪಾಲು ಹೊಂದಿದ್ದಾರೆ, ಕೆಲವು ಪೊಲೀಸ್ ಅಧಿಕಾರಿಗಳೂ ಶಾಮೀಲಾಗಿದ್ದಾರೆ, ಬಿಟ್‌ಕಾಯಿನ್ ಹಗರಣವು ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಚಾಚಿಕೊಂಡಿದೆ ಎಂಬ ಮಾತುಗಳೆಲ್ಲ 2021ರಲ್ಲಿ ಬಂದುಹೋದವು. ಆದರೆ, ಯಾವ ಪ್ರಭಾವಿಯ ವಿರುದ್ಧವೂ ಪ್ರಕರಣ ದಾಖಲಾಗಲಿಲ್ಲ.

ಇಡೀ ಪ್ರಕರಣ ಬಿಟ್‌ಕಾಯಿನ್ ಎನ್ನುವ ಕ್ರಿಪ್ಟೊಕರೆನ್ಸಿ ಬಗ್ಗೆ ಸಾರ್ವಜನಿಕರ ಆಸಕ್ತಿ ಹೆಚ್ಚಾಗುವಂತೆ ಮಾಡಿತು. ಬಿಟ್‌ಕಾಯಿನ್ ಎಂಬುದು ನಿಜವಾಗಿಯೂ ಒಂದು ಕಾಯಿನ್ ಎಂದು ತಿಳಿದವರು, ಅದನ್ನು ಕಾಯಿನ್ ಅಲ್ಲವೇ ಅಲ್ಲ; ಗುಪ್ತಸಂಖ್ಯೆಗಳ ಒಂದು ಗುಚ್ಛ ಎಂಬುದನ್ನು ಅರಿತರು. ಬಿಟ್‌ಕಾಯಿನ್‌ನಲ್ಲಿ ಹಣವನ್ನು ಹೂಡಿಕೆ ಮಾಡಲು ಅವಕಾಶ ಕಲ್ಪಿಸುವ ಡಿಜಿಟಲ್ ವೇದಿಕೆಗಳು ಹೆಚ್ಚು ಹೆಚ್ಚು ಜಾಹೀರಾತುಗಳನ್ನು ನೀಡಿದವು.

ಬಿಟ್‌ಕಾಯಿನ್ ಹಗರಣದ ಸದ್ದು ರಾಜ್ಯದಲ್ಲಿ ಜೋರಾಗಿದ್ದ ಸಂದರ್ಭದಲ್ಲಿ ಪ್ರಧಾನಿಯವರನ್ನು ದೆಹಲಿಯಲ್ಲಿ ಭೇಟಿ ಮಾಡಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ಬಿಟ್‌ಕಾಯಿನ್ ಹಗರಣದ ಬಗ್ಗೆ ತಲೆ ಕೆಡಿಸಿಕೊಳ್ಳಬೇಡಿ ಎಂದು ಪ್ರಧಾನಿಯವರು ಹೇಳಿದ್ದಾರೆ' ಎಂದು ಸುದ್ದಿಗಾರರಿಗೆ ತಿಳಿಸಿದ್ದರು.

ಇದಾದ ನಂತರದಲ್ಲಿ, ಕೇಂದ್ರವು ದೇಶದಲ್ಲಿ ಕ್ರಿಪ್ಟೊಕರೆನ್ಸಿಗಳನ್ನು ನಿಯಂತ್ರಿಸಲು ಮಸೂದೆಯೊಂದನ್ನು ಸಿದ್ಧಪಡಿಸಿದೆ ಎಂಬ ವರದಿಗಳು ಇವೆ. ಈ ಮಸೂದೆ ಕ್ರಿಪ್ಟೊಕರೆನ್ಸಿಗಳನ್ನು ರೂಪಾಯಿಯ ರೀತಿಯಲ್ಲಿಯೂ ಪಾವತಿಗೆ